**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 5205/2013**

ಹೆಸರು ಃ ದೇವಪ್ಪ ಶಶಿಕುಮಾರ್

ತಂದೆಯ ಹೆಸರು ಃ ವೈ ದೇವಪ್ಪ

ವಯಸ್ಸು ಃ 54

ಉದ್ಯೋಗ ಃ ಕಾರ್ಯದರ್ಶಿಗಳು, ನ್ಯೂ ಬ್ಲಾಸಮ್ ಶಾಲೆ

ವಾಸ ಃ ರಾಜಾಜಿನಗರ.

CW-1, PW-1

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 29.11.2024**

**ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿಯವರಿಂದಃ**

1. ಆರೋಪಿಯನ್ನು ನಾನು ನೋಡಿರುತ್ತೇನೆ. ಚಾಸಾ-2 ರಿಂದ 4 ರವರ ಪರಿಚಯ ಇರುತ್ತದೆ. ನಾನು ದಿಃ01.05.2013 ಬೆಳಗ್ಗಿನ ಜಾವ 12.10 ಸಮಯಕ್ಕೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಥೈಲ್ಯಾಂಡ್ ನಿಂದ ಬಂದಿರುತ್ತೇನೆ. ಆ ರೀತಿ ಬರುವ ಸಂದರ್ಬದಲ್ಲಿ ನಾನು 1 ಟಿವಿ ಯನ್ನು ತಂದಿರುತ್ತೇನೆ. ಅದನ್ನು ಕಸ್ಟಮ್ ಅಧಿಕಾರಿಗಳು ತಡೆಗಟ್ಟಿ ಕಸ್ಟಮ್ ವಿಭಾಗಕ್ಕೆ ಕಳುಹಿಸಿರುತ್ತಾರೆ. ನಂತರ ನನ್ನ ಬಳಿ ಹಣ ಇಲ್ಲದ ಕಾರಣ ನಾನು ವಾದ ಮಾಡುತ್ತೇನೆ. ನಂತರ ನನಗೆ ದಂಡವನ್ನು ವಿಧಿಸಿದ್ದು ಅದನ್ನು ಕಟ್ಟಲು ಗೇಟ್ ಬಳಿ ಹೋಗಿ ನನ್ನ ಹೆಂಡತಿಯಿಂದ ಹಣ ಪಡೆದುಕೊಂಡು ಬರುತ್ತೇನೆ ಎಂದು ತಿಳಿಸಿ, ಹಣವನ್ನು ಕಟ್ಟುತ್ತೇನೆ. ನಂತರ ಆರೋಪಿಯು ನನ್ನನ್ನು ಯಾಕೆ ಓಡಾಡುತ್ತಿದ್ದೀರಿ ಎಂದು ತಡೆಗಟ್ಟುತ್ತಾರೆ. ಆಗ ಆರೋಪಿ ಏಕಾಏಕಿ ಜಾಸ್ತಿ ಮಾತನಾಡುತ್ತಿದ್ದೀಯಾ ಎಂದು ಹೇಳಿ, ಕಪಾಳಕ್ಕೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಹಾಕುತ್ತಾರೆ. ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ಪೋಲಿಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಆ ರೀತಿ ಮಹಜರ್ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ನನ್ನ ಕಪಾಳಕ್ಕೆ ಹೊಡೆದು, ಬೆದರಿಕೆ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ. ಎನ್ ಜಿ ಎ ಆರೋಪಿ ಪರ ವಕೀಲರಿಂದಃ**

1. ನಾನು ಡಿ ಫಾರ್ಮ ವರೆಗೆ ಓದಿರುತ್ತೇನೆ. ನಾನು ಶಾಲೆಯನ್ನು ನಡೆಸುತ್ತಿದ್ದೇನೆ. ನಾನು ಮತ್ತು ನನ್ನ ಹೆಂಡತಿ ಥೈಲ್ಯಾಂಡ್ ಗೆ ಪ್ರವಾಸಕ್ಕೆ ಹೋಗಿದ್ದೆವು. ಆ ರೀತಿ ಥೈಲ್ಯಾಂಡ್ ನಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ 11.40 ಗಂಟೆಗೆ ವಿಮಾನ ಬಂದಿರುತ್ತದೆ. ನಾನು ಟಿವಿ ತೆಗೆದುಕೊಂಡು ಗ್ರೀನ್ ದ್ವಾರದ ಮೂಲಕ ಬಂದಿದ್ದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆ ರೀತಿ ಗ್ರೀನ್ ದ್ವಾರದ ಮುಖಾಂತರ ಬರಬೇಕಾದರೆ ಯಾವುದೇ ವ್ಯಕ್ತಿ ಯಾವುದೇ ವಸ್ತುವನ್ನು ತರಬಾರದು ಎಂದರೆ ಸಾಕ್ಷಿ ನಾವು ಟಿವಿ ತೆಗೆದುಕೊಂಡು ಅದೇ ದ್ವಾರದಲ್ಲಿ ಬಂದಿದ್ದೆವು ಎಂದು ನುಡಿಯುತ್ತಾರೆ. ಆ ರೀತಿ ನಾನು ಗ್ರೀನ್ ದ್ವಾರದ ಮೂಲಕ ಟಿವಿ ತಂದಿದ್ದ ಕಾರಣ ನನ್ನನ್ನು ತಡೆ ಹಿಡಿದಿದ್ದರು ಎಂದರೆ ಸರಿ. ನಮ್ಮ ವಿಮಾನದಲ್ಲಿ ಹಲವಾರು ಜನ ವಸ್ತುಗಳನ್ನು ತೆಗೆದುಕೊಂಡು ಬಂದಿದ್ದರು ಎಂದರೆ ಸರಿ.
2. ಟಿವಿ ಜೊತೆಯಲ್ಲಿ ಕ್ಯಾಮಾರವನ್ನು ಸಹ ನಾನು ತಂದಿದ್ದೆ ಎಂದರೆ ಸರಿ. ಸದರಿ ಕ್ಯಾಮಾರ ಹೆಚ್ಚು ಬೆಲೆ ಬಾಳುವ ವಸ್ತು ಎಂದರೆ ಸರಿಯಲ್ಲ. ಸದರಿ ಕ್ಯಾಮಾರವನ್ನು ನನ್ನ ಜೊತೆ ತೆಗೆದುಕೊಂಡು ಹೋಗಲು ನಾನು ಘೋಷಣೆ ಮಾಡಿರಲಿಲ್ಲ ಎಂದರೆ ಸರಿ. ನಾನು ಕ್ಯಾಮಾರ ಮತ್ತು ಟಿವಿ ನ್ನು ತಂದಿದ್ದ ಕಾರಣ ನನ್ನನ್ನು ತಡೆ ಹಿಡಿದಿದ್ದರು ಎಂದರೆ ಸರಿಯಲ್ಲ. ಕಸ್ಟಮ್ ಅಧಿಕಾರಿಗಳ ಮುಂದೆ ದಂಡ ಪಾವತಿ ಮಾಡುವ ಬಗ್ಗೆ ವಾದ ಮಾಡಿದ್ದೇನೆ ಎಂದರೆ ಸರಿ. ಆ ರೀತಿ ನಾನು ವಾದ ಮಾಡಿದ ನಂತರ ಕಸ್ಟಮ್ ಅಧಿಕಾರಿಗಳಿಗೆ ದೂರವಾಣಿಯಲ್ಲಿ ಮಾತನಾಡುವಂತೆ ಮೊಬೈಲ್ ಕೊಡಲು ಹೋಗಿದ್ದೆ ಎಂದರೆ ಸರಿಯಲ್ಲ. ಆ ರೀತಿ ಕಸ್ಟಮ್ ಅಧಿಕಾರಿಗಳು ನನಗೆ ದಂಡ ಪಾವತಿ ಮಾಡುವಂತೆ ಎಚ್ಚರಿಕೆ ನೀಡುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ದಂಡ ಪಾವತಿ ಮಾಡಲು ಹಲವಾರು ಜನ ಇದ್ದು, ನಾನೊಬ್ಬನೇ ಗಲಾಟೆ ಮಾಡಿದ್ದೆ ಎಂದರೆ ಸರಿಯಲ್ಲ. ನನ್ನನ್ನು ಹೊರತು ಪಡಿಸಿ ಬೇರೆಯಾರಾದರೂ ಪ್ರಯಾಣಿಕರು ಗಲಾಟೆ ಮಾಡುತ್ತಿದ್ದರಾ ಎಂದರೆ ಸಾಕ್ಷಿ ಆ ಬಗ್ಗೆ ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಕಸ್ಟಮ್ ಅಧಿಕಾರಿಗಳು ವಿಧಿಸಿದ್ದ ದಂಡವನ್ನು ನಾನು ಪಾವತಿ ಮಾಡುವುದಿಲ್ಲ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ದಂಡ ಪಾವತಿ ಮಾಡಿದ ನಂತರ ಗ್ರೀನ್ ದ್ವಾರದ ಮೂಲಕ ಹೊರ ಹೋಗ ಬೇಕುಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.
3. ವರ್ಷಕ್ಕೆ ಒಮ್ಮೆ ನಾನು ಪ್ರವಾಸಕ್ಕೆ ಹೋಗುತ್ತೇನೆ. ನಾನು ಗ್ರೀನ್ ದ್ವಾರದ ಮೂಲಕ ಬರುವಾಗ ಆರೋಪಿಯು ಅದರ ಮೇಲ್ವಿಚಾರಣೆಗೆ ಇದ್ದರು ಎಂದರೆ ಸರಿ. ಆ ರೀತಿ ನಾನು ದಂಡ ಪಾವತಿ ಮಾಡಿದ್ದ ರಶೀದಿಯನ್ನು ತೋರಿಸಿದ್ದರೆ ಆರೋಪಿ ನನ್ನನ್ನು ಬಿಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ದಂಡ ಪಾವತಿ ಮಾಡಿದ ನಂತರ ಅವಾಚ್ಯ ಶಬ್ದಗಳಿಂದ ಬೈದಿದ್ದೇನೆ ಎಂದರೆ

ಸರಿಯಲ್ಲ. ನಾನು ಆರೋಪಿಯ ಬಳಿ ಹೋಗಿ ಲಂಚ ಪಡೆದು ಬಿಡುತ್ತೀರ ಎಂದು ಹೇಳಿದ್ದೆ ಎಂದರೆ ಸರಿ. ನಾನು ತುಂಬಾ ಗಲಾಟೆ ಮಾಡುತ್ತಿದ್ದ ಕಾರಣ ಭದ್ರತಾ ಸಿಬ್ಬಂದಿಯವರನ್ನು ಕರೆಹಿಸಿ ಕೂರಿಸುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ರೀತಿ ಭದ್ರತಾ ಸಿಬ್ಬಂದಿಗೆ ನನ್ನನ್ನು ಹಿಡಿದುಕೊಡುತ್ತಾರೆ ಎಂಬ ಉದ್ದೇಶದಿಂದ ಪೋಲಿಸರಿಗೆ ದೂರು ಕೊಡುತ್ತಾರೆ ಎಂದರೆ ಸರಿಯಲ್ಲ. ನಾನು ಹೊರಗೆ ಬರುವಾಗ ಆರೋಪಿಗೆ ಬೆದರಿಕೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಂಡ ಪಾವತಿ ಮಾಡಿದ್ದ ಕಾರಣ, ಕೋಪದಿಂದ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಗಲಾಟೆ ಮಾಡಿದ್ದ ಕಾರಣ ಆರೋಪಿ ಕರ್ತವ್ಯ ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ, ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ದಿ:09.08.2021 ರ ವಿಜಯ ಕರ್ನಾಟಕ ಪತ್ರಿಕೆಯ ಪುಟ ಸಂಖ್ಯೆ.9 ರಲ್ಲಿ ಪ್ರಕಟವಾಗಿರುವ ಮಾಹಿತಿಯನ್ನು ನೋಡಿ, ಸಾಕ್ಷಿಯು ಒಪ್ಪಿಕೊಂಡ ಕಾರಣ, ಪತ್ರಿಕೆಯನ್ನು ನಿಡಿ-1 ಎಂದು, ಸಂಬಂದಪಟ್ಟ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಆರೋಪಿಗೆ ನಾನೇ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**